class/ sub : 7th Social science
Date :

Sri Ramakrishna Vidya Kendra,Shivanahalli
worksheet

Topic 16
Student name
Village name :

# ರಮಾನಂದರು

**ಕ್ರಿ.ಶ. ೧೩೯೦ – ೧೪೬೦**

ರಮಾನಂದರು ಮಧ್ಯಕಾಲದ ಭಕ್ತಿ ಮಾರ್ಗದ ಪ್ರವರ್ತಕರಲ್ಲಿ ಅಗ್ರಗಣ್ಯರು. ಶ್ರೀರಾಮಾನುಜಾಚಾರ್ಯರು ಇವರ ಗುರುಗಳು. ರಮಾನಂದರು ಪ್ರಯಾಗ, ಅಂದರೆ ಇಂದಿನ ಅಲಹಾಬಾದನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡಿದ್ದರು. ಮಾಗಧಿ, ಅರ್ಧಮಾಗಧಿ, ಮೈಥಿಲಿ ಭಾಷೆಗಳಲ್ಲಿ ಇವರು ಪ್ರವಚನಗಳನ್ನು ನೀಡುತ್ತಿದ್ದರು. ಅವು ರಮಾನಂದರು ನೆಲೆಸಿದ್ದ ನೆಲದ ಭಾಷೆಗಳಾಗಿದ್ದವು.



ರಮಾನಂದರು (ಅಂಚೆ ಚೀಟಿ)

ಭಕ್ತಿಯ ಹಾದಿಯಲ್ಲಿ ನಡೆದು ಮೋಕ್ಷ ಕಾಣಲು ಎಲ್ಲರಿಗೂ ಮುಕ್ತ ಅವಕಾಶವಿದೆ ಎಂದು ಸಾರಿ ಹೇಳಿ, ಆ ರೀತಿ ನಡೆದೂ ತೋರಿಸಿದ ಮಹಾತ್ಮರಿವರು. ರಾಯಿದಾಸ್ (ನಾಯಿಂದ), ಧನ್ನ (ಜಾಟ್–ಒಕ್ಕಲಿಗ), ಕಬೀರ್ (ಮುಸ್ಲಿಂ) ಇವರ ಪ್ರಮುಖ ಶಿಷ್ಯರು ಎಂಬುದನ್ನು ಇಲ್ಲಿ ನೆನೆಯಬಹುದು.

ಸ್ವಾಮಿ ರಮಾನಂದರು ರಮಾನಂದಿ ಸಂಪ್ರದಾಯ ಎಂಬ ಪಂಥವನ್ನು ಸ್ಥಾಪಿಸಿದರು. ಇವರು ಉತ್ತರ ಭಾರತದ ಸಮಾಜ ಸುಧಾರಕ ಎನಿಸಿದ್ದರು. ತಮ್ಮ ಜೀವನದ ಬಹುಪಾಲು ಸಮಯವನ್ನು ಇವರು ಮೌಂಟ್ ಅಬುವಿನಲ್ಲಿ ಕಳೆದರು.


ರಮಾನಂದರ ರೇಖಾಚಿತ್ರ

ರಮಾನಂದರ ಬಗ್ಗೆ ಇನ್ನಷ್ಟು ಮಾಹಿತಿ, ಅವರ ಇನ್ನೊಂದಿಷ್ಟು ಬೋಧನೆ ಸಂಗ್ರಹಿಸಿ ಇಲ್ಲಿ ಬರೆಯಿರಿ.

___________________________________________
___________________________________________
___________________________________________
___________________________________________
___________________________________________
___________________________________________
___________________________________________
___________________________________________
___________________________________________
___________________________________________
___________________________________________

ಇಲ್ಲಿ ರಮಾನಂದರ ಚಿತ್ರ ಬಿಡಿಸಿರಿ